# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 235(299)
ಸದಸ್ಯರ ಹೆಸರು - ಡಾ:ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ - 12.08.2025
ಉತ್ತರಿಸಬೇಕಾಗಿರುವ ಸಚಿವರು - ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.

## ವಿಷಯ: ಅಕ್ರಮ ಗಣಿಗಾರಿಕೆ ಕುರಿತು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಕಾನೂನು ಕ್ರಮಗಳ ವಿಳಂಬ ನೀತಿ ಅನುಸರಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹೀಗೆ ವಿಳಂಬಗೊಳ್ಳಲು ಕಾರಣ ಯಾರು? ಈ ವಿಳಂಬ ನೀತಿಗೆ ಕಾರಣದರಾದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? | ಅಕ್ರಮ ಗಣಿಗಾರಿಕೆ ಪ್ರಕರಣಗಳ ತನಿಖೆ ನಡೆಸಲು ಸರ್ಕಾರವು 2008 ಮತ್ತು 2010 ರಲ್ಲಿ ಮಾನ್ಯ ಲೋಕಾಯುಕ್ತರಿಗೆ ವಹಿಸಿರುತ್ತದೆ. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿಯ ಭಾಗ-1ನ್ನು 2008 ರಲ್ಲಿ ಹಾಗೂ ಭಾಗ-2ನ್ನು 2011ರಲ್ಲಿ ಸಮಗ್ರ ವರದಿಯನ್ನು ಸರ್ಕಾರಕ್ಕೆ ನೀಡಿರುತ್ತಾರೆ. ಸದರಿ ವರದಿಯನ್ನಾಧರಿಸಿ ಸರ್ಕಾರವು ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.<br>1. ಸರ್ಕಾರವು ಸದರಿ ವರದಿಗಳಲ್ಲಿನ ಅಧ್ಯಾಯ 1,2,3 ಮತ್ತಿತರೆ ಸಂಬಂಧಪಟ್ಟ ಅಧ್ಯಾಯಗಳನ್ನು ಒಳಗೊಂಡಂತೆ ಕಬ್ಬಿಣದ ಅದಿರನ್ನು ಬಂದರುಗಳ ಮೂಲಕ ರಫ್ತು ಮಾಡಿದ ಪ್ರಕರಣಗಳನ್ನು ಒಳಾಡಳಿತ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ HD 98 CID 2013 Dated 18.11.2013ರಲ್ಲಿ ಸಿಬಿಐ ಸಂಸ್ಥೆಗೆ ವಹಿಸಲಾಗಿರುತ್ತದೆ.<br>2. ಸರ್ಕಾರವು ಆದೇಶಸಂಖ್ಯೆ: ಸಿಐ 282 ಎಂಎಂಎಂ 2011 (ಪಿ) ಬೆಂಗಳೂರು ದಿನಾಂಕ:22.11.2013 ರಂದು ಸದರಿ ಆದೇಶಕ್ಕೆ ಲಗತ್ತಿಸಿದ ಪ್ರಕರಣಗಳಲ್ಲಿ ಹೆಚ್ಚುವರಿ ತನಿಖೆ ಕೈಗೊಳ್ಳಲು ಲೋಕಾಯುಕ್ತದ ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ.<br>3. ಸರ್ಕಾರವು ಆದೇಶ ಸಂಖ್ಯೆ: ಸಿಐ 282 ಎಂಎಂಎಂ 2011 (ಪಿ) ಬೆಂಗಳೂರು ದಿನಾಂಕ:06.06.2017 ರಂದು ಮಾನ್ಯ ಲೋಕಾಯುಕ್ತರು ಸಲ್ಲಿಸಿದ ವರದಿ ಭಾಗ-1 ಮತ್ತು ಭಾಗ-2ರಲ್ಲಿ ಪ್ರಸ್ತಾಪಿಸಿದ ಎಲ್ಲಾ ಪ್ರಕರಣಗಳನ್ನು (ಸಿ.ಬಿ.ಐ ಮತ್ತು ಜಾರಿನಿರ್ದೇಶನಾಲಯ ತನಿಖೆ ನಡೆಸುತ್ತಿರುವ ಪ್ರಕರಣಗಳನ್ನು ಹೊರತುಪಡಿಸಿ) ತನಿಖೆಗಾಗಿ ಲೋಕಾಯುಕ್ತದ ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ.<br>4) ಸಿಬಿಐ ಸಂಸ್ಥೆಯು ಪ್ರಾಥಮಿಕ ತನಿಖೆ ನಡೆಸಿ ಮುಕ್ತಾಯಗೊಳಿಸಿರುವ ಪ್ರಕರಣಗಳು ಹಾಗೂ ಪ್ರಾಥಮಿಕ ತನಿಖೆ ನಡೆಸಿ, ರಿಜಿಸ್ಟರ್ ಕೇಸ್ (RCs) ಗಳನ್ನಾಗಿ ಪರಿವರ್ತಿಸಲು ವಿಫಲವಾಗಿ ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿರುವ ಪ್ರಕರಣಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಿಐ 282 ಎಂಎಂಎಂ 2013 (ಭಾ-2) ದಿನಾಂಕ:21.03.2018 ರಂದು ಲೋಕಾಯುಕ್ತದ ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ.<br>5) ತದನಂತರ, ಸರ್ಕಾರವು ಆದೇಶ ಸಂಖ್ಯೆ ಸಿಐ 18 ಎಂಎಂಎಂ 2019 ದಿನಾಂಕ 22.11.2024ರಲ್ಲಿ 10 "ಸಿ" ವರ್ಗದ ಗಣಿ ಗುತ್ತಿಗೆಗಳ ಪ್ರಕರಣಗಳನ್ನು ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ.<br>ಮೇಲೆ ವಿವರಿಸಿರುವ ಕ್ರಮದಂತೆ, ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ಕ್ರಮವಹಿಸಲಾಗುತ್ತಿದೆ. |
| ಆ) | ರಾಜ್ಯದ ಅಗಾಧ ಸಂಪತ್ತು ಲೂಟಿಯಾದ ಅನೇಕ ಪ್ರಕರಣಗಳು ಇದ್ದು, ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯ ಶಿಕ್ಷೆಗೆ ಒಳಪಡಿಸಿದೆ. ಅಕ್ರಮಗಳ ಗಣಿಗಾರಿಕೆಯ ಇನ್ನು ಎಷ್ಟು | ರಾಜ್ಯದ ಅಗಾಧ ಸಂಪತ್ತು ಲೂಟಿಯಾದ ಪ್ರಕರಣಗಳ ಕುರಿತು ಕರ್ನಾಟಕ ಲೋಕಾಯುಕ್ತ, ವಿಶೇಷ ತನಿಖಾ ತಂಡದಲ್ಲಿ ಇದುವರೆವಿಗೂ ಒಟ್ಟು 110 ಪ್ರಕರಣಗಳು ದಾಖಲಾಗಿರುತ್ತದೆ. ಈ ಪೈಕಿ 94 ಪ್ರಕರಣಗಳಲ್ಲಿ ಅಂತಿಮ ವರದಿಯನ್ನು ಸಂಬಂಧ ಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಇನ್ನು 16 ಪ್ರಕರಣಗಳು ತನಿಖಾ ಹಂತದಲ್ಲಿರುತ್ತದೆ. ಮೊಕದ್ದಮೆ ಸಂಖ್ಯೆ 20/2015ರ ಪ್ರಕರಣದಲ್ಲಿ ಆರೋಪಿಗಳಿಗೆ ಸಜೆ/ಶಿಕ್ಷೆ ಆಗಿರುತ್ತದೆ. |

| | | |
|---|---|---|
| | ಪ್ರಕರಣಗಳು ತನಿಖೆಗೆ ಒಳಪಡಬೇಕಿದೆ: | |
| ಇ) | ಈ ಅಕ್ರಮ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಆದ ನಷ್ಟವೆಷ್ಟು: ಅಕ್ರಮ ಗಣಿಗಾರಿಕೆಯ ಭಾಗಿದಾರರಿಂದ ನಷ್ಟ ವಸೂಲಿ ಮಾಡಲಾಗಿದೆಯೇ: ಎಷ್ಟು ಪ್ರಕರಣಗಳಲ್ಲಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. : | ವಿಶೇಷ ತನಿಖಾ ತಂಡದಲ್ಲಿ ದಾಖಲಾಗಿ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಲಾಗಿರುವ 62 ಪ್ರಕರಣಗಳಿಗೆ ಸಂಬಂಧಿಸಿದಂತೆ ರೂ.615,29,96,232.42/-ನಷ್ಟ ಮತ್ತು 42 ಪ್ರಾಥಮಿಕ ವಿಚಾರಣೆಗಳಿಗೆ ಸಂಬಂಧಿಸಿದಂತೆ ರೂ. 937,54,58,579.05/-ನಷ್ಟ, ಒಟ್ಟು ರೂ.1552,94,54,811.47/-ನಷ್ಟ ಉಂಟಾಗಿರುತ್ತದೆ. 5 ಪ್ರಕರಣಗಳಿಗೆ ಸರ್ಕಾರದಿಂದ ಅಧಿಕೃತ ಆದೇಶವನ್ನು ಪಡೆದು, ಕ್ರಿಮಿನಲ್ ಆರ್ಡಿನನ್ಸ್ ಆಕ್ಟ್ 1944ರಡಿಯಲ್ಲಿ ಆಸ್ತಿ ಮುಟ್ಟುಗೋಲು ಮಾಡಲು ಮಾನ್ಯ ನ್ಯಾಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಮಾನ್ಯ ನ್ಯಾಯಾಲಯವು ಒಂದು ಪ್ರಕರಣದಲ್ಲಿ ರೂ.12,11,80,465/- ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಂತಿಮ ಆದೇಶ ಹೊರಡಿಸಿರುತ್ತದೆ. |
| ಈ | ಅಕ್ರಮ ಗಣಿಗಾರಿಕೆಯ ಪ್ರಕರಣಗಳನ್ನು ತನಿಖೆ ಮಾಡಲು ತನಿಖಾ ತಂಡವನ್ನು ರಚಿಸಲು ಸರ್ಕಾರ ಮುಂದಾಗುವುದೇ: ಹಾಗೂ ಈ ಪ್ರಕರಣಗಳ ವಿಲೇವಾರಿಗಾಗಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗುವುದೇ? | ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ತನಿಖೆ ಮಾಡಲು ಈಗಾಗಲೇ ವಿಶೇಷ ತನಿಖಾ ತಂಡ ರಚಿಸಿ, ಪ್ರಕರಣಗಳನ್ನು ವಹಿಸಲಾಗಿರುತ್ತದೆ.<br>ಅಗತ್ಯವಿದ್ದಲ್ಲಿ, ಶೀಘ್ರಗತಿ ನ್ಯಾಯಾಲಯ (Fast track Court)ಸ್ಥಾಪಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. |

ಸಿಐ 14 ಎಂಐಸಿ 2025

(ಎಸ್.ಎಸ್.ಮಲ್ಲಿಕಾರ್ಜುನ್)

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು